3. ಪ್ರಾಮಾಣಿಕತೆ ತಕ್ಕ ಸಂಭಾವನೆಯನ್ನು ನೀಡುತ್ತದೆ.

4. ಸಂತೋಷ ಕ್ಷಣಿಕ ಕೆಲಸವಲ್ಲ.

**IX. ಟಿಪ್ಪಣಿ ಓದಿ, ಪ್ರಶ್ನೆಗಳನ್ನು ಉತ್ತರಿಸಿರಿ: 2x6=12**

1. ನೂರ್ಜಹಾನಳ ಮನೆ ರಸ್ತೆಯ ಪಕ್ಕದಲ್ಲಿದೆ. ಅವಳು ತನ್ನ ಮನೆಯನ್ನು ಸ್ವಚ್ಛ ಮಾಡಿ ಒಪ್ಪವಾಗಿ ಇಡುತ್ತಾಳೆ. ಬೆಳಿಗ್ಗೆ ಮತ್ತು ಸಂಜೆ ಕಸ ಗುಡಿಸಿ ಮನೆಯನ್ನು ಅಲಂಕರಿಸುವುದು ಅವಳ ದಿನಚರಿ. ಆದರೆ, ಅವಳು ಮನೆಯ ಕಸ ಮತ್ತು ಕೊಳಚೆಯನ್ನು ರಸ್ತೆಯಲ್ಲಿ ಎಸೆಯುತ್ತಾಳೆ. ಅವಳ ಗೆಳತಿಯರು ಅವಳನ್ನು ಪ್ರಶ್ನಿಸಿದಾಗಾ ಅವಳು ಹೀಗೆಂದಳು: **"**ರಸ್ತೆಯಲ್ಲಿ ಕಸ ಹಾಕುವ ಸ್ವಾತಂತ್ರ್ಯ ನನಗಿದೆ. ಪ್ರತಿ ದಿವಸ ರಸ್ತೆಯನ್ನು ಗುಡಿಸುವ ಜಾಡಮಾಲಿ ಇದನ್ನೂ ಶುದ್ದ ಮಾಡಲಿ**"**.

   **a) i) ನೂರ್ಜಹಾನಳ ವರ್ತನೆ ಸರಿಯೆ?**

   **ii) ಏಕೆ?**

   **b) i) ಅವಳು ತನ್ನ ಸ್ವಾತಂತ್ರ್ಯವನ್ನು ಸರಿಯಾಗಿ ಬಳಸಿದಳೆ?**

   **ii) ಹೇಗೆ?**

   **c) i) ರಸ್ತೆಗೆ ಕಸ ಎಸೆಯುವುದರ ಬಗ್ಗೆ ನಿನ್ನ ಅಭಿಪ್ರಾಯ ಏನು?**

2. ಮಣಿರತ್ನ ದ್ವಿತಿಯ ಪಿ.ಯು.ಸಿ. ವಿದ್ಯಾರ್ಥಿ. ಅವನು ರಾತ್ರಿ ಹನ್ನೊಂದು ಗಂಟೆಯವರೆಗೆ ಓದುತ್ತಾನೆ. ಅನಂತರ ಹನ್ನೆರಡು ಗಂಟೆಯವರೆಗೆ ಟೇಪ್‌ರೆಕಾರ್ಡನ್ನು ಹಾಕುತ್ತಾನೆ. ಪಕ್ಕದ ಮನೆಯವರು ಟೇಪ್‌ರೆಕಾರ್ಡಿನ ಗಟ್ಟಿ ಶಬ್ದದಿಂದ ತೊಂದರೆಗೊಳಗಾಗಿ ಅವನಿಗೆ ದೂರು ಕೊಟ್ಟರು. ಆಗ ಅವನು "ನನಗೆ ಸಂಗೀತ ಕೇಳುವ ಸ್ವಾತಂತ್ರ್ಯವಿದೆ" ಎಂದು ಉತ್ತರಿಸಿದನು.

   **a) i) ಮಣಿರತ್ನನಿಗೆ ಸಾಮಾಜಿಕ ಕಳಕಳಿ ಇದೆಯೇ?**

   **ii) ಏಕೆ?**

   **b) i) ಅವನು ಮಾಡಿದ ತಪ್ಪು ಏನು?**

   **ii) ಟೇಪ್‌ರೆಕಾರ್ಡ್/ಧ್ವನಿವರ್ಧಕವನ್ನು ಹೇಗೆ ಬಳಸಬೇಕು?**

   **c) ಸ್ವಾತಂತ್ರ್ಯವನ್ನು ಹೇಗೆ ಬಳಸಿಕೊಳ್ಳಬೇಕು?**



## ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 09–01–2016** **ಸಮಯ : $2^1/_2$ ಘಂಟೆ**

**ತರಗತಿ : VII** **ಅಂಕ : 80**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರ ಆರಿಸಿ ಬರೆಯಿರಿ: 10x1=10**

1. ನಾವು ಪ್ರತಿಪಾದಿಸುವ ಮತ್ತು ನಂಬುವ ಗುಣವೇ ________
(ಸಂಪ್ರದಾಯ; ಮೌಲ್ಯ; ಬುದ್ಧಿವಂತಿಕೆ)
2. ಆಳ ಭಾವನೆಗಳುಳ್ಳ ವ್ಯಕ್ತಿ ಮಾತ್ರ ಇತರರ ________ ಅರ್ಥಮಾಡಿಕೊಳ್ಳಬಲ್ಲ.
(ಭಾವನೆಗಳನ್ನು; ವಿಚಾರಧಾರೆಯನ್ನು; ಆಸೆಗಳನ್ನು)
3. ಒಳ್ಳೆಯ ಭಾವನೆಗಳನ್ನು ______ ಭಾವನೆಗಳೆಂದು ಕರೆಯುತ್ತಾರೆ.
(ಸ್ವತಂತ್ರ; ಸೌಹಾರ್ದ; ಪ್ರಾಮಾಣಿಕತೆ)
4 ಕಾಯಾ, ವಾಚಾ, ಮನಸಾ ಪ್ರವರ್ಧಿಸುವವರು ________ ಜನರು.
(ಒಳ್ಳೆಯ; ಕೆಟ್ಟ; ಆಲಸಿಗಳು)
5. ಸೌಕರ್ಯ ಮತ್ತು ಎಲ್ಲಕ್ಕೂ ಮಿಗಿಲಾಗಿ ________ ಬೆಲೆಯುಳ್ಳದ್ದು.
(ಸಂತೋಷ; ಹಾನಿ; ಸ್ವಾತಂತ್ರ್ಯ)
6. ________ ನಮ್ಮ ಹೃದಯವನ್ನು ನಿರ್ಮಲಗೊಳಿಸುತ್ತದೆ.
(ಸೇಡು; ಕ್ಷಮೆ; ಗೆಳೆತನ)
7. ವಿಧೇಯ ಸೇವಕರ ಬಗ್ಗೆ ಯಜಮಾನರು ______ ಪಟ್ಟರು.
(ಸಂತೋಷ; ದುಃಖ; ಅತೃಪ್ತಿ)
8. ನಾವು ಒಂದು ಕೆಲಸ ಮಾಡಲು ಸೂಕ್ತ ______ ಗುರುತಿಸಬೇಕು.
(ವಿಷಯವನ್ನು; ಸಮಯವನ್ನು; ಅವಕಾಶ)
9. ಸ್ವಚ್ಛತೆ ಆಂತರಿಕ ________ ಪ್ರತಿಬಿಂಬ.
(ಕಳಂಕತೆಯ; ಪ್ರಜ್ಞೆಯ; ಪಾವಿತ್ರತೆಯ)

10. ಸಂತೋಷ ಅದ್ಭುತ ವಸ್ತು, ನೀನು ಕೊಟ್ಟಷ್ಟು ಅದು ನಿನ್ನಲ್ಲಿ ______ ವಾಗುತ್ತದೆ.
(ಕಡಿಮೆ; ಅಧಿಕ; ಮಾಧ್ಯಮ)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ : 5x1=5**

1. ಕೊರತೆಯುಳ್ಳವರಿಗೆ ಸೇವೆ ಸಲ್ಲಿಸುವುದು ಎಂದರೆ ಅದು ________ಗೆ ಸಲ್ಲಿಸಿದಂತೆ.
2. ನಾವು ಏಕೆ ಮತ್ತು ಹೇಗೆ ನೀತಿವಂತರಾಗಬಹುದೆಂದು ________ ಕಲಿಸುತ್ತದೆ.
3. ಯಶಸ್ಸಿನ ಮನುಷ್ಯನಾಗಬೇಡ, ಪ್ರತಿಯಾಗಿ ________ ಮಾನವನಾಗು.
4. ಮನುಷ್ಯನಲ್ಲಿರುವ ಅನುಕಂಪ, ಸೌಹಾರ್ದತೆಯ ಆಂತರಿಕ ಭಾವನೆಗಳು ಅವರನ್ನು ______ ದಲ್ಲಿ ಬಂಧುಸುತ್ತದೆ.
5. ________ ಬಡವರಾಗಿದ್ದರೂ ಅಮೇರಿಕಾದ ಅಧ್ಯಕ್ಷರಾದರು.

**III. ಹೊಂದಿಸಿ ಬರೆಯಿರಿ: 5x1=5**

| | | | |
|---|---|---|---|
| 1. | ಸಂತೋಷ | – | ಪ್ರಾಮಾಣಿಕ |
| 2. | ಮೌಲ್ಯ | – | ಸ್ವಾರ್ಥ |
| 3. | ಅನುಕಂಪ | – | ಅಂತರಂಗದೊಳಗಿನ ವ್ಯವಹಾರ |
| 4. | ದುರ್ಗುಣ | – | ಬೆಲೆ, ಕಿಮ್ಮತ್ತು |
| 5. | ಮರ ಕಡಿಯುವವ | – | ಭಾವನೆ |

**IV. ಈ ಕೆಳಗಿನ ವಾಕ್ಯಗಳು ಸರಿ ಅಥವಾ ತಪ್ಪು ಎಂದು ಬರೆಯಿರಿ : 5x1=5**

1. ಸ್ವಾತಂತ್ರ್ಯ ಎಂದರೆ ನಿನಗೆ ಇಷ್ಟ ಬಂದುದ್ದನ್ನು ಮಾಡುವುದು.
2. ನಮ್ಮ ಪ್ರತಿಭೆಗಳನ್ನು ನಾವು ಗುರುತಿಸುವುದು ಅಗತ್ಯ.
3. ಸಾಕು ನಾಯಿಗೆ ಸ್ವಾತಂತ್ರ್ಯವಿರಲಿಲ್ಲ.
4. ಸಂಗೀತ ತನ್ನ ಕಲಿಕೆಯಲ್ಲಿ ತುಂಬಾ ಬುದ್ದಿವಂತಳು.
5. ಸಂತೋಷವೆಂದರೆ ಸಂತೃಪ್ತಿಯಿಂದಿರುವ ಸ್ಥಿತಿ.

**V. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯಗಳಲ್ಲಿ ಉತ್ತರಿಸಿರಿ: 5x1=5**

1. ಒಂದು ಕೊಕ್ಕರೆಗೆ ಕಲ್ಲು ತಾಗಿದಾಗ ಉಳಿದ ಕೊಕ್ಕರೆಗಳು ಏನು ಮಾಡಿದವು?
2. ಮಾನವ ಜೀವಿಗಳ ಎರಡು ಗುಣಗಳು ಯಾವುವು?
3. ದೇವತೆ ನಮಗೆ ಯಾವ ನೀತಿಯನ್ನು ಕಲಿಸಲು ಅಪೇಕ್ಷಿಸುವಳು?



4. ನಿನ್ನಲ್ಲಿರುವ ಒಂದು ಪ್ರತಿಭೆಯನ್ನು ಗುರುತಿಸಿ ಬರೆ.
5. ಲಿಲ್ಲಿಯ ಜೀವನದಿಂದ ನೀನು ಯಾವ ಅವಗುಣವನ್ನು ತೊಡೆದು ಹಾಕುವಿ?

**VI. ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ನೈರ್ಮಲ್ಯದ ಸಕಾರಾತ್ಮಕ ಗುಣಗಳು ಯಾವುವು?
2. ವಿಧೇಯನಾದ ಸೇವಕ ಏನು ಮಾಡಿದ? ಏಕೆ?
3. ಸಂತೋಷ ಎಂದರೇನು?
4. ಅವಕಾಶಗಳನ್ನು ಬಳಸಿಕೊಳ್ಳಲು ನಿನಗಿರುವ ಬಹುದೊಡ್ಡ ತೊಡಕು ಯಾವುದು?
5. ಸಾಕುನಾಯಿ ಹಾಗೂ ಬೀದಿನಾಯಿಯ ಕಥೆಯಿಂದ ನೀನೇನು ಕಲಿತೆ?
6. ಆರೋಗ್ಯ ಪ್ರಜ್ಞೆ ಎಂದರೇನು?
7. ರಿಚ್ಚರ್ಡ್ ಪಾರ್ಟಿಯಲ್ಲಿ ಹೇಗೆ ವರ್ತಿಸಿದನು?

**VII. ಯಾವುದಾದರೂ ಆರು ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ: 6x3=18**

1. ಮೌಲ್ಯ ಶಿಕ್ಷಣದ ಉದ್ದೇಶಗಳನ್ನು ಬರೆ.
2. ಸಂತೋಷದಿಂದಿರಲು ಜೋನ್ ಪೊವೆಲ್ ಸೂಚಿಸುವುದೇನು?
3. ನಮ್ಮ ಸುತ್ತಮುತ್ತ ಶುದ್ದತೆಯನ್ನು ಹೇಗೆ ಕಾಪಾಡಬಹುದು?
4. ಲಿಂಕನ್ ಮತ್ತು ಬಿಥೋವನ್ ಹೇಗೆ ಪ್ರಖ್ಯಾತರಾದರು?
5. ಯಾವ ಗುಣ ಸಮಾಜಕ್ಕೆ ಒಳಿತನ್ನು ಮಾಡುತ್ತದೆ? ಹೇಗೆ?
6. ಮಾನವ ಜೀವಿಗಳ ಸ್ವಭಾವವೇನು?
7. ನೀನು ನಿನ್ನ ಮನೆಯಲ್ಲಿ ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವೆಯಾ? ಹೇಗೆ?
8. ಪ್ರಾಮಾಣಿಕತೆ ಅಗತ್ಯ ಎಂದು ಏಕೆ ಹೇಳುತ್ತಿ?

**VIII. ಈ ಕೆಳಗಿನ ಎರಡು ವಿಷಯದ ಕುರಿತು ಟಿಪ್ಪಣಿ ಬರೆಯಿರಿ : 2x5=10**

1. ಇಂದು ಸಮಾಜದಲ್ಲಿ ನಿನಗೆ ಯಾವ ಮೌಲ್ಯಗಳು ಕುಸಿದಂತೆ ಕಾಣುತ್ತದೆ?
2. ಸ್ವಾತಂತ್ರ್ಯ ಇಲ್ಲದೆ ಪ್ರಗತಿ ಇಲ್ಲ.